ಗಂಡ, ಹೆಂಡತಿ, ಮಗು ಕುಳಿತಿದ್ದ ಸ್ಕೂಟರೊಂದು ಇದ್ದಕ್ಕಿದ್ದಂತೆ ಎದುರಿಗೆ ಬಂತು. ಜಬ್ಬರ್ ಜೀವವನ್ನೆಲ್ಲ ಕಾಲ ತುದಿಗೆ ತಂದುಕೊಂಡು ಬ್ರೇಕ್ ಒತ್ತಿದ. ಶಿವಶಕ್ತಿ ಸಹಾ ಬೆಚ್ಚಿ ನಿಂತಿತಾದರೂ ಅಷ್ಟರಲ್ಲಿ ತಡವಾಗಿತ್ತು. ಬಸ್ಸಿನ ಮುಂಭಾಗ ತಗುಲಿದ ಸ್ಕೂಟರು ಧೊಪ್ಪನೆ ನೆಲಕ್ಕೆ ಬಿತ್ತು. ಅದರ ಮೇಲಿದ್ದ ಗಂಡ, ಹೆಂಡತಿ ರಸ್ತೆಗುರುಳಿದರು. ಮಗುವಂತೂ ಚಿಮ್ಮಿ ಪಕ್ಕದ ಸೈಟಿಗೆ ಹೋಗಿ ಬಿತ್ತು. 'ಯಾ ಅಲ್ಲಾ' ಎಂದು ಕಿರುಚಿದ ಜಬ್ಬರ್ ಬಾಗಿಲು ತೆರೆದು ನೆಲಕ್ಕೆ ಧುಮುಕಿದವನೇ ಮಗುವಿನತ್ತ ಓಡಿದ. ಮುಖ ಮೇಲಾಗಿ ಬಿದ್ದಿದ್ದ ಅದು ಜಿಗ್ಗು ಪೊದೆಯೊಂದರೊಳಗೆ ಸಿಕ್ಕಿಕೊಂಡು ಅಲ್ಲಾಡದಾಗಿತ್ತು. ಬದುಕನ್ನು ಬಂಧಿಸುವ, ಕಾಣದ ಯಾವುದೋ ಶಕ್ತಿಯೊಂದರ ಕಬಂಧ ಬಾಹುವಿನಂತೆ ಮಗುವನ್ನು ಹಿಡಿದುಕೊಂಡಿದ್ದ ಆ ಮುಳ್ಳುಗಳನ್ನು ಒಂದೊಂದಾಗಿ ಬಿಡಿಸತೊಡಗಿದ ಜಬ್ಬರ್. ಅದೇಕೋ ಜೋರಾಗಿ ಅಳದ ಆ ಮಗುವಿಗೆ ಆದದ್ದಾದರೂ ಏನೆಂದು ತಿಳಿಯದ ಜಬ್ಬರ್ ಅದನ್ನು ಎಚ್ಚರಗೊಳಿಸುವ ಬಗೆ ತಿಳಯದೇ 'ಆಸಿಫ್, ಉಠೋ ಬೇಟೇ... ಕಣ್ತೆಗಿ. ಇಲ್ನೋಡು ಪುಟ್ಟಾ... ಆಸಿಫ್' ಎಂದು ತೊದಲತೊಡಗಿದ. ಅಷ್ಟರಲ್ಲಿ ಓಡಿಬಂದ ಮಗುವಿನ ತಾಯಿ ಮಗುವನ್ನೆತ್ತಿಕೊಂಡವಳೇ ಅಪ್ಪೂ ಎನ್ನುತ್ತಾ ಅದರ ಬೆನ್ನಿನ ಮೇಲೆ ಸಣ್ಣದಾಗಿ ಹೊಡೆದಳು. ಆ ಹೊಡೆತಕ್ಕೆ, ಆಗಿದ್ದ ಆಘಾತದಿಂದ ಹೊರಬಂದ ಮಗು ಜೋರಾಗಿ ಅಳತೊಡಗಿತು. ಇನ್ನೂ ಭಯವಿಳಿಯದ ಜಬ್ಬರ್ ಅದರ ತಲೆ, ಮೈಯನ್ನೆಲ್ಲಾ ತಡವಿ ನೋಡಿದ. ಎಲ್ಲೂ ಗಾಯವಾಗಿರಲಿಲ್ಲ. ಹೇ ಖುದಾ ಎನ್ನುತ್ತಾ ಅಲ್ಲೇ ಕುಸಿದು ಕುಳಿತ.

ಅಲ್ಲಿಂದ ಮುಂದೆ ಜಬ್ಬರ್ ಚಲಿಸಲೇ ಇಲ್ಲ. ಬಸ್ಸೇ ಓಡಿಸಿಕೊಂಡು ಬಂದಂತೆ, ಸ್ಟೇರಿಂಗೇ ಅವನ ಕೈ ಹಿಡಿದು ತಿರುಗಿಸಿದಂತೆ, ಬ್ರೇಕು-ಆಕ್ಸಿಲೇಟರ್‌ಗಳೇ ಕಾಲೆತ್ತಿ ತಲೆಯ ಮೇಲಿಟ್ಟುಕೊಂಡಂತೆ ವಾಹ್ ಸವಿಯ ತನಕ ಶಿವ ಶಕ್ತಿಯೇ ಅವನನ್ನು ಕರೆದುಕೊಂಡು ಬಂತು. ಬಸ್ಸಿಳಿದೊಡನೆ ನಲ್ಲತಂಬಿ ಎಂದಿನಂತೆ ಕೈ ಮುಚ್ಚಿಕೊಂಡು ಓಡಿದ. ಆದರೆ ಜಬ್ಬರ್ ಮಾತ್ರ ಪ್ರತಿ ದಿನದ ಹಾಗೆ ರಸ್ತೆ ದಾಟಿ ಪೊದೆಗಳತ್ತ ನಡೆಯಲಿಲ್ಲ. ಹೆದ್ದಾರಿಯ ತುದಿಯಲ್ಲಿ ನಿಂತು ಹಾಯುವ ವಾಹನಗಳನ್ನೇ ತದೇಕಚಿತ್ತನಾಗಿ ನೋಡಿದ. ಬೆಳಕಿನ ಡಬ್ಬಿಗಳಂತೆ ಚಲಿಸುವ ಲೆಕ್ಕವಿಲ್ಲದಷ್ಟು ವಾಹನಗಳು. ಅದರೊಳಗೆ ಬೆಚ್ಚಗೆ ಕುಳಿತ, ಮಲಗಿದ, ಚಲಾಯಿಸುತ್ತಿರುವ ಅಗಣಿತ ಪ್ರಯಾಣಿಕರು. ಹೊರಡುವ ವೇಳೆಗೆ ಇನ್ನೆಲ್ಲೋ ತಲುಪುತ್ತೇವೆ ಎಂಬ ನಂಬಿಕೆಯಲ್ಲಿ ಹೊರಟವರೇ ಎಲ್ಲರೂ. ಆದರೆ ಎಲ್ಲರ ಪ್ರಯಣವೂ ತಲುಪುವೆನೆಂದುಕೊಂಡ ಗಮ್ಯದಲ್ಲೇ ಕೊನೆಯಾಗುತ್ತದೆಯೇ? ಯಾರ ಯಾನವನ್ನು ಯಾವ ಬಸ್ಸು ಢಿಕ್ಕಿ ಹೊಡೆದು ತಡೆಯುತ್ತದೆಯೋ? ಯಾರ ಬದುಕನ್ನು ಯಾವ ತಿರುವು ನುಂಗುತ್ತದೆಯೋ? ತಾನಿಲ್ಲಿ ನಿಂತು ಹೀಗೆ ಯೋಚಿಸುತ್ತಿರುವ ಈ ಕ್ಷಣದಲ್ಲೂ ಎಲ್ಲೋ, ಯಾವುದೋ ಹೆದ್ದಾರಿಯ ನಡುಮಧ್ಯದಲ್ಲಿ ಗಾಡಿ ನಿಲ್ಲಿಸಿ ನಿಂತ ಯಾರೋ ಒಬ್ಬ ನತದೃಷ್ಟವಂತ ಡ್ರೈವರ್ 'ಬೇಟೇ ಆಸಿಫ್' ಎನ್ನುತ್ತಾ ಯಾರ ನಿಶ್ಚಲ ಮಗುವನ್ನು ಕದಲಿಸಲು ಗೋಗರೆಯುತ್ತಿದ್ದಾನೋ?

ಯೋಚನೆಗಳು ಹೆದ್ದಾರಿಯ ವಾಹನಗಳಂತೆಯೇ ರೊಂಯ್ಯ ರೊಂಯ್ಯನೆ ಹಾಯುತ್ತಿದ್ದವು. ಅಷ್ಟರಲ್ಲಿ ತಂಬಿಯಿಂದ ನಡೆದಿದ್ದೆಲ್ಲವನ್ನೂ ತಿಳಿದ ಉಮೇಶಿ ಹಿಂದಿನಿಂದ ಬಂದವನೇ ಜಬ್ಬರನ ಕೈಹಿಡಿದು 'ಹೆಹ್ಹೆಹ್ಹೇ.. ಏನಪ್ಪಾ ನೀನು. ಹೈವೇಲೇ ಆಗ್ಲಿ, ಜೀವನದಲ್ಲೇ ಆಗ್ಲಿ ಒಂದು ಗಾಡಿಗೆ ಇನ್ನೊಂದು ಗಾಡಿ ಕುಟ್ಟೋದೇ. ಯಾರೋ ಒಬ್ರು ಕೆಳ್ಗೆ ಬೀಳೋದೇ. ಅದ್ಕೆಲ್ಲ ಇಷ್ಟೊಂದು ತಲೆ ಕೆಡಿಸ್ಕೋಬಾರ್ದು. ಬಾ ಬಾ. ಚಾಯ್ ತಣ್ಣಗಾಗ್ತಿದೆ' ಎನ್ನುತ್ತಾ ಎಳೆದುಕೊಂಡು ಟೇಬಲ್ಲಿಗೆ ತಂದು ಕೂರಿಸಿದ. ಅಲ್ಲಿ ಈಗಾಗಲೇ ಸ್ಥಾಪಿತನಾಗಿ ಚಾಯ್ ಹೀರುತ್ತಿದ್ದ ನಲ್ಲತಂಬಿಯೂ ಸೇರಿದಂತೆ ಮೂವರೂ ಒಂದಷ್ಟು ಹೊತ್ತು ವಿಷಮವಾದೊಂದು ಮೌನದ ಪಾಲಾಗಿ ಕುಳಿತರು. ಕೊನೆಗೆ ನಲ್ಲತಂಬಿಯೇ ವಿಷಯ ಬದಲಾಯಿಸುವವನಂತೆ, 'ಉಮೇಶಿ ಅಣ್ಣ, ನಾನು ಹೇಳಿದ್ನಲ್ಲ ಹುಡ್ಗಿ? ಅವ್ಳು ಮದ್ವೆಗೆ ಒಪ್ಪಿದಾಳೆ. ಆದ್ರೆ ಸಾಲಾ, ಅವ್ಳಣ್ಣ ನಕ್ರಾ ಮಾಡ್ತಿದಾನೆ. ಅವ್ಳನ್ನ ಮನೆಯಿಂದ ಕರ್ಕೊಂಡ್ಬಂದು ಮದ್ವೆ ಆಗೋದು ಅಂದ್ಕೊಂಡಿದೀನಿ' ಎಂದ. ಅದಕ್ಕೆ ಉಮೇಶಿ, 'ಏಯ್ ಆತ್ರಗೆಟ್ಟೋನೇ, ಅದೇನು ಉಮ್ಮಣ್ಣಿ ಒತ್ತಿ ಹಿಡ್ಕೊಂಡು ಟಾಯ್ಲೆಟ್ಟಿಗೆ ಓಡಿದಷ್ಟು ಸೊಬಿ ಅದ್ಕೊಂಡಿದೀಯಾ? ಹಂಗೆಲ್ಲ ಮಾಡೋದಕ್ಕೆ ನಿನ್ ಬ್ಯಾಗ್ರೌಂಡ್ ಗಟ್ಟಿ ಇರ್ಬೇಕು. ಅವ್ಳಣ್ಣನ್ ಕಡೆಯೋರು ಎಲ್ಲೋ ಸರ್ಕಲ್ಲಲ್ಲಿ ಬಸ್ ಅಡ್ಡಾಕಿ, ನಿನ್ನ ಕೊರಳ